**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪೂರ ಇವರ ನ್ಯಾಯಾಲಯ**

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.**17/2020**
ಪಿ.ಡಬ್ಲೂ.**04**
ಸಿ.ಡಬ್ಲೂ.**03**

ಸಾಕ್ಷಿದಾರರ ಹೆಸರು : ಪಾಂಡಪ್ಪ ದೊಡ್ಡಮನಿ

ತಂದೆಯ ಹೆಸರು : ರಾಮಪ್ಪ

ವಯಸ್ಸು : 50 ವರ್ಷ.

ಉದ್ಯೋಗ : ಒಕ್ಕಲುತನ

ವಾಸಸ್ಥಳ : ದೇವಾಪೂರ

ಇಂದು ದಿನಾಂಕ **11-07-2023** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು

ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದ

**1)** ನನಗೆ ಮೃತ ನಾಗವ್ವ ಶಂಕರ ಇಮನದ ನನಗೆ ಪರಿಚಯ ಇಲ್ಲ. ಆಕೆಯ ಜಾತಿ ಯಾವುದು ನನೆಗೆ ಗೊತ್ತಿಲ್ಲ. ನನಗೆ ಆರೋಪಿತರ ಪರಿಚಯ ಇಲ್ಲ( ಈ ದಿನ ಆರೋಪಿತರು ಗೈರು ಹಾಜರು ಉಳಿದಿದ್ದು ಆರೋಪಿ ಪರ ವಕೀಲರು ವಿನಾಯತಿಗೆ ಅರ್ಜಿ ಸಲ್ಲಿಸಿದ್ದು ಅರ್ಜಿಯಲ್ಲಿ ಆರೋಪಿತರ ಗುರುತನ್ನು ವಿವಾದ ಮಾಡುವುದಿಲ್ಲ ಅಂತಾ ಹೇಳಿರುತ್ತಾರೆ). ಅವರು ಯಾವ ಜಾತಿಗೆ ಸೇರಿದವರಾಗಿರುತ್ತಾರೆ ನನಗೆ ತಿಳಿದಿಲ್ಲ. ಚಾಸಾ-**13** ಇವರ ಪರಿಚಯ ನನಗೆ ಇಲ್ಲ. ನನಗೆ ಮೃತ ನಾಗವ್ವ ಇವಳ ಮದುವೆ ಯಾರೊಂದಿಗೆ ಆಗಿತ್ತು ಅಕೆಗೆ ಎಷ್ಟು ಜನ ಮಕ್ಕಳು ನನಗೆ ಗೊತ್ತಿಲ್ಲ. ಮೃತ ನಾಗವ್ವ ಮತ್ತು ಆರೋಪಿ ನಂ. **1** ಮತ್ತು **2** ಇವರ ನಡುವಿನ ಸಂಬಂಧ ಏನೂ ನನಗೆ ಗೊತ್ತಿಲ್ಲ. ಮೃತ ನಾಗವ್ವ ಮತ್ತು ಆರೋಪಿ ನಂ. **1** ಮತ್ತು **2** ನಡುವೆ ಆದ ಗಲಾಟೆ ನನಗೆ ಗೊತ್ತಿಲ್ಲ. ಅವರು ಜೀವ ಬೆದರಿಕೆ ನಾಗವ್ವಳಿಗೆ ಹಾಕಿದ ವಿಷಯ ತಿಳಿದಿಲ್ಲ. ಮೃತ ನಾಗವ್ವ ಮತ್ತು ಚಾಸಾ-**13** ಯಾವತ್ತು ನನ್ನ

ಮನೆಯ ಪಕ್ಕದಲ್ಲಿ ಬಾಡಿಗೆಗೆ ವಾಸ ಇರಲಿಲ್ಲ. ಚಾಸಾ-**13** ತನ್ನ ಮಗಳ ಹುಟ್ಟು ಹಬ್ಬಕ್ಕೆ ನನ್ನನ್ನು ಕರೆದಿಲ್ಲ. ಮೃತ ನಾಗವ್ವಳಿಗೆ ಬೆಂಕಿ ಹತ್ತಿದ್ದನ್ನು ನಾನು ಯಾವತ್ತು ನೋಡಿಲ್ಲ. ನಾರಾಯಣ ಸ್ವಾಮಿ ಕಾಲಿಗೂ ಕೂಡಾ ಬೆಂಕಿ ಹತ್ತಿದ್ದು ನಾನು ಯಾವತ್ತು ನೋಡಿಲ್ಲ. ನಾನು ಪೋಲಿಸರ ಮುಂದೆ ಆರೋಪಿತರು ನಾಗವ್ವಳ ಮನೆಯಿಂದ ಓಡಿ ಹೋಗುತ್ತಿರುವುದನ್ನು ನೋಡಿದ ಬಗ್ಗೆ ಹೇಳಿಕೆ ನೀಡಿಲ್ಲ. ಮೃತ ನಾಗವ್ವ ಮತ್ತು **6** ನೇ ಆರೋಪಿ ನಾರಾಯಣ ಸ್ವಾಮಿ ಮಂಗಳೂರಿನಲ್ಲಿ ವಾಸ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ನನ್ನನ್ನು ಪೋಲಿಸರು ಠಾಣೆಗೆ ಕರೆಯಿಸಿ ಯಾವತ್ತು ನಾರಾಯಣ ಸ್ವಾಮಿಯನ್ನು ತೋರಿಸಿಲ್ಲ. ಮೃತ ನಾಗವ್ವ ಮತ್ತು ಆಕೆಗೆ ಜನಿಸಿದ ಗಂಡು ಮಗು ಆಸ್ಪತ್ರೆಯಲ್ಲಿ ತೀರಿಕೊಂಡ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನನ್ನು ಠಾಣೆಗೆ ಕರೆಯಿಸಿ ಆರೋಪಿ ನಂ. **3, 4, 5** ಇವರನ್ನು ತೋರಿಸಿಲ್ಲ. ಪೋಲಿಸರ ಮುಂದೆ ನಾನು ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆ ನೀಡಿಲ್ಲ.

**2)** ಸಾಕ್ಷಿಗೆ ದಿನಾಂಕ:**01-01-2020** ರ ಗುನ್ಹೆ ಜಾಗೆಯ ಪಂಚನಾಮೆಯಲ್ಲಿರು ಅದರ ಮೇಲೆ ಇರುವ ಸಹಿಯನ್ನು ತೋರಿಸಲಾಗಿ ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿ.ಪಿ.-**10** ಅಂತಾ ಸಾಕ್ಷಿ ಸಹಿಯನ್ನು ನಿ.ಪಿ.-**10(ಎ)** ಅಂತಾ ಗುರುತಿಸಲಾಯಿತು. ನಿ.ಪಿ.-**10** ಕ್ಕೆ ಬಬಲೇಶ್ವರ ಪೋಲಿಸರು ಸಹಿ ಮಾಡುವಂತೆ ಹೇಳಿದ್ದರಿಂದ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಪೋಲಿಸರು ನಮ್ಮೂರಿನಲ್ಲಿ ಒಂದು ಕೇಸು ಆಗಿದೆ ಅದಕ್ಕೆ ಸಹಿ ಮಾಡು ಅಂತಾ ಹೇಳಿದ್ದರಿಂದ ಅದಕ್ಕೆ ಸಹಿ ಮಾಡಿರುತ್ತೇನೆ. ಪೋಲಿಸರು ನನ್ನ ಮುಂದೆ ಯಾವುದೇ ಪಂಚನಾಮೆ ಮಾಡಿ ವಸ್ತುಗಳನ್ನು ವಶಕ್ಕೆ ಪಡೆದುಕೊಂಡಿಲ್ಲ. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ಒಪ್ಪಿದ್ದರಿಂದ ಸದರಿ ಫೋಟೋಗಳನ್ನು ನಿ.ಪಿ.-**11** ಮತ್ತು **12** ಅಂತಾ ಗುರುತಿಸಲಾಯಿತು. ಮೃತ ನಾಗವ್ವ ಘಟನಾ ಸ್ಥಳದಲ್ಲಿ ನನ್ನ ಮುಂದೆ

ಆರೋಪಿತರು ಪೆಟ್ರೋಲ್ ಹಾಕಿ ಬೆಂಕಿ ಹಚ್ಚಿದ ಬಾಬತ್ತು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಮಹಜರ, ತಾನು ನೀಡಿದ ಹೇಳಿಕೆ ಮತ್ತು ಮರುಹೇಳಿಕೆಯ ವಿರುದ್ಧವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು.)

## ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ

**1)** ದಿನಾಂಕ: **01-01-2020** ರಂದು ಬಬಲೇಶ್ವರ ಪೋಲಿಸರು ಬೆಳಿಗ್ಗೆ **10-00** ರಿಂದ **11-00** ಗಂಟೆ ಅವಧಿಯಲ್ಲಿ ನನ್ನ ಮತ್ತು ಚಾಸಾ-**2** ಇವರ ಸಮಕ್ಷಮದಲ್ಲಿ ನಿ.ಪಿ.-**10** ರ ಪ್ರಕಾರ ಚಾಸಾ-**13** ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿ ಅಲ್ಲಿ ಪೆಟ್ರೋಲ್ ವಾಸನಿ ಬರುತ್ತಿದ್ದ **2** ಲಿಟರ್ ಪ್ಲಾಸ್ಟಿಕ ಬಾಟಲಗಳು, ಒಂದು ಬೆಂಕಿ ಪೊಟ್ಟಣ ಕಡ್ಡಿ ಇದ್ದದ್ದು ಇವುಗಳನ್ನು ನಮ್ಮ ಸಮಕ್ಷಮ ಜಪ್ತಿ ಮಾಡಿಕೊಂಡಿರುತ್ತಾರೆ ಅನ್ನುವುದು ಸರಿಯಲ್ಲ. ಸದರಿ ಸಮಯದಲ್ಲಿ ನಿ.ಪಿ.-**11** ಮತ್ತು **12** ರಪ್ರಕಾರ ತೆಗೆದಿರುತ್ತಾರೆ ಅನ್ನುವುದು ಸರಿಯಲ್ಲ.

**2)** ದಿನಾಂಕ: **01-01-2020** ರಂದು ನಾನು ಈಗ ವಿವರವಾಗಿ ಓದಿ ಹೇಳಿದ ಹಾಗೇ " ನಾನು ಮೇಲಿನ ವಿಳಾಸದ ರಹವಾಸಿ ಇದ್ದು _ _ _ _ _ _ ಫಿರ್ಯಾದಿ ಕೊಟ್ಟ ಸಂಗತಿ ಬಗ್ಗೆ ಕೇಳಿ ಗೊತ್ತಾಯಿತು" ಅಂತಾ ಹೇಳಿಕೆ ನೀಡಿದ್ದೆನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.-**13** ಅಂತಾ ಗುರುತಿಸಲಾಯಿತು.

**3)** ದಿನಾಂಕ: **12-01-2020** ರಂದು ನಾನು ಈಗ ವಿವರವಾಗಿ ಓದಿ ಹೇಳಿದ ಹಾಗೇ " ನಾನು ದಿನಾಂಕ **01-01-2020** ರಂದು _ _ _ _ _ _ ಕೇಳಿ ತಿಳಿದುಕೊಂಡೆನು" ಅಂತಾ ಹೇಳಿಕೆ ನೀಡಿದ್ದೆನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.-**14** ಅಂತಾ ಗುರುತಿಸಲಾಯಿತು.

**4)** ದಿನಾಂಕ: **28-03-2020** ರಂದು ನಾನು ಈಗ ವಿವರವಾಗಿ ಓದಿ ಹೇಳಿದ

ಹಾಗೇ " ನಾನು ಈ ದಿವಸ _ _ _ _ _ _ ಕೇಳಿ ಗೊತ್ತಾಯಿತು " ಅಂತಾ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.**-15** ಅಂತಾ ಗುರುತಿಸಲಾಯಿತು.

**5)** ದಿನಾಂಕ**: 22-04-2020** ರಂದು ನಾನು ಈಗ ವಿವರವಾಗಿ ಓದಿ ಹೇಳಿದ ಹಾಗೇ " ಈ ದಿವಸ ನನಗೆ _ _ _ _ _ _ ಕೇಳಿ ಗೊತ್ತಾಯಿತು " ಅಂತಾ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.**-16** ಅಂತಾ ಗುರುತಿಸಲಾಯಿತು.

**6)** ದಿನಾಂಕ**: 16-06-2020** ರಂದು ನಾನು ಈಗ ವಿವರವಾಗಿ ಓದಿ ಹೇಳಿದ ಹಾಗೇ " ಈ ದಿವಸ ನನಗೆ _ _ _ _ _ _ ನೋಡಿ ಗುರುತಿಸಿದ್ದು ಇರುತ್ತದೆ" ಅಂತಾ ಹೇಳಿಕೆ ನೀಡಿದ್ದೇನೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.**-17** ಅಂತಾ ಗುರುತಿಸಲಾಯಿತು.

**7)** ನನಗೆ ಈ ಪ್ರಕರಣದ ಎಲ್ಲ ಮಾಹಿತಿಗಳು ತಿಳಿದಿದ್ದರು ಸಹ, ಮತ್ತು ನಿ.ಪಿ.**-10** ಪ್ರಕಾರ ಮಹಜರ ಮಾಡಿದ್ದರು ಸಹ ನಾನು ಈಗ ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ.ಎಸ್.ಹೆಚ್.ಎಲ್.ವಕೀಲರಿಂದ ಆರೋಪಿತರ ಪರವಾಗಿ</u>

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.

**11/07/2023**

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪೂರ ಇವರ ನ್ಯಾಯಾಲಯ**

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.**17/2020**
ಪಿ.ಡಬ್ಲೂ.**05**
ಸಿ.ಡಬ್ಲೂ.**04**

ಸಾಕ್ಷಿದಾರರ ಹೆಸರು : ಮಹಾದೇವ ಕಾಂಬಳೆ
ತಂದೆಯ ಹೆಸರು : ಸಿದ್ರಾಮಪ್ಪ
ವಯಸ್ಸು : 56 ವರ್ಷ.
ಉದ್ಯೋಗ : ಖಾಸಗಿ ಕೆಲಸ
ವಾಸಸ್ಥಳ : ಬಬಲೇಶ್ವರ

ಇಂದು ದಿನಾಂಕ **11-07-2023** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

**1)** ಸಾಕ್ಷಿಗೆ ದಿನಾಂಕ:**02-01-2020** ರ ದುಖಾಪತ ಫಿರ್ಯಾದಿಯ ಮೈಮೇಲಿನ ಸುಟ್ಟ ಬಟ್ಟೆಯ ಜಪ್ತಿ ಪಂಚನಾಮೆಯ ಮೇಲೆ ಇರುವ ಸಹಿಯನ್ನು ತೋರಿಸಲಾಗಿ ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿ.ಪಿ.**-18** ಅಂತಾ ಸಾಕ್ಷಿ ಸಹಿಯನ್ನು ನಿ.ಪಿ.**-18(ಎ)** ಅಂತಾ ಗುರುತಿಸಲಾಯಿತು. ನಿ.ಪಿ.**-18** ರ ಮೇಲೆ ಇರುವ ಸಹಿಯನ್ನು ಈಗ್ಗೆ **3-4** ವರ್ಷಗಳ ಹಿಂದೆ ಬಬಲೇಶ್ವರ ಪೋಲಿಸ ಠಾಣೆಯಲ್ಲಿ ಮಾಡಿರುತ್ತೇನೆ. ಪೋಲಿಸರು ಸಹಿ ಮಾಡುವಂತೆ ಹೇಳಿದ್ದರಿಂದ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಯಾವ ಕಾರಣಕ್ಕೆ ಸಹಿ ಮಾಡಿರುತ್ತೇನೆ ನನಗೆ ಹೇಳಲಾಗುವುದಿಲ್ಲ. ಪೋಲಿಸರು ನನ್ನ ಸಮಕ್ಷಮ ಪಂಚನಾಮೆ ಮಾಡಿ ಯಾವುದೇ ಬಟ್ಟೆಗಳನ್ನು ವಶಕ್ಕೆ ಪಡೆದುಕೊಂಡಿಲ್ಲ.

ನಿ.ಪಿ.-**18** ರಲ್ಲಿನ ಅಂಶಗಳು ನನಗೆ ತಿಳಿದಿಲ್ಲ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ಒಪ್ಪಿದ್ದರಿಂದ ಸದರಿ ಫೋಟೋವನ್ನು ನಿ.ಪಿ.-**19** ಅಂತಾ ಗುರುತಿಸಲಾಯಿತು. ಸದರಿ ಫೋಟೋವನ್ನು ಪೋಲಿಸರು ಯಾವ ಉದ್ದೇಶಕ್ಕಾಗಿ ತೆಗೆದಿರುತ್ತಾರೆ ಅಂತಾ ನನಗೆ ಹೇಳಲು ಆಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಮಹಜರಗೆ ವಿರುದ್ದವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>

**1)** ದಿನಾಂಕ**: 02-01-2020** ರಂದು ಬಬಲೇಶ್ವರ ಪೋಲಿಸ ಠಾಣೆಯಲ್ಲಿ ಮೃತ ನಾಗವ್ವಳ ಗಂಡ ಶಂಕರ ಇವನು ಹಾಜರ ಪಡಿಸಿದ ಮೃತಳ ಮೈಮೇಲಿನ ಸುಟ್ಟ ಬಟ್ಟೆಗಳನ್ನು ನನ್ನ ಮತ್ತು ಚಾಸಾ -**5** ಇವರ ಸಮಕ್ಷಮ ಪಂಚನಾಮೆ ಮಾಡಿ ನಿ.ಪಿ.-**18** ರ ಪ್ರಕಾರ ಒಂದು ಬಿಳಿ ಗುಲಾಬಿ ಬಣ್ಣದ ಅಲ್ಲಲ್ಲಿ ಹೂವು ಇದ್ದ ಒಂದು ಸುಟ್ಟ ಸೀರೆ ಹಾಗೂ ತಿಳಿ ಕೇಸರಿ ಬಣ್ಣದ ಅಲ್ಲಲ್ಲಿ ಸುಟ್ಟ ಲಂಗವನ್ನು ವಶಕ್ಕೆ ಪಡೆದುಕೊಂಡಿದ್ದರು ಅನ್ನುವುದು ಸರಿಯಲ್ಲ. ಸದರಿ ಪಂಚನಾಮೆಯನ್ನು ಆ ದಿನ ಬೆಳಿಗ್ಗ **11-00** ರಿಂದ **11-30** ಗಂಟೆವರೆಗೆ ಠಾಣೆಯಲ್ಲಿ ನಮ್ಮ ಸಮಕ್ಷಮ ಮಾಡಿದ್ದರು ಅನ್ನುವುದು ಸರಿಯಲ್ಲ. ನಿ.ಪಿ.-**18** ರಲ್ಲಿರು ಅಂಶಗಳನ್ನು ನಾನು ಓದಿ ತಿಳಿದುಕೊಂಡು ಠಾಣೆಯಲ್ಲಿ ಸಹಿ ಮಾಡಿದ್ದೆ ಅನ್ನುವುದು ಸರಿಯಲ್ಲ. ಸದರಿ ಕಾಲಕ್ಕೆ ನಿ.ಪಿ.-**19** ರಂತೆ ಫೋಟೋವನ್ನು ಸಹ ತೆಗೆಯಲಾಗಿತ್ತು ಅಂದರೆ ಸರಿಯಲ್ಲ.

**2)** ನನಗೆ ನಿ.ಪಿ.-**18** ರಲ್ಲಿನ ಅಂಶಗಳು ತಿಳಿದ್ದರು ಸಹ ನಾನು

ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ.ಎಸ್.ಹೆಚ್.ಎಲ್.ವಕೀಲರಿಂದ ಆರೋಪಿತರ ಪರವಾಗಿ
ಪಾಟೀ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.
ಮರುವಿಚಾರಣೆಃ ಇರುವುದಿಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.

**11/07/2023**

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪೂರ ಇವರ ನ್ಯಾಯಾಲಯ**

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.**17/2020**
ಪಿ.ಡಬ್ಲೂ.**06**
ಸಿ.ಡಬ್ಲೂ.**05**

ಸಾಕ್ಷಿದಾರರ ಹೆಸರು : ಹಣಮಂತ ಮೂರಮಾನ

ತಂದೆಯ ಹೆಸರು : ಗಿರಿಮಲ್ಲ

ವಯಸ್ಸು : 31 ವರ್ಷ.

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಬಬಲೇಶ್ವರ

ಇಂದು ದಿನಾಂಕ **11-07-2023** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು

ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದ

**1)** ಸಾಕ್ಷಿಗೆ ದಿನಾಂಕ:**02-01-2020** ರ ದುಖಾಪತ ಫಿರ್ಯಾದಿಯ ಮೈಮೇಲಿನ ಸುಟ್ಟ ಬಟ್ಟೆಯ ಜಪ್ತಿ ಪಂಚನಾಮೆಯ ಮೇಲೆ ಇರುವ ಸಹಿಯನ್ನು ತೋರಿಸಲಾಗಿ ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ಈಗಾಗಲೇ ನಿ.ಪಿ.**-18** ಅಂತಾ ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.**-18**(ಬಿ) ಅಂತಾ ಗುರುತಿಸಲಾಯಿತು. ನಿ.ಪಿ.**-18** ರ ಮೇಲೆ ಇರುವ ಸಹಿಯನ್ನು ಈಗ್ಗ **3-4** ವರ್ಷಗಳ ಹಿಂದೆ ಬಬಲೇಶ್ವರ ಪೋಲಿಸ ಠಾಣೆಯಲ್ಲಿ ಮಾಡಿರುತ್ತೇನೆ. ಪೋಲಿಸರು ಸಹಿ ಮಾಡುವಂತೆ ಹೇಳಿದ್ದರಿಂದ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಯಾವ ಕಾರಣಕ್ಕೆ ಸಹಿ ಮಾಡಿರುತ್ತೇನೆ ನನಗೆ ಹೇಳಲಾಗುವುದಿಲ್ಲ. ಪೋಲಿಸರು ನನ್ನ ಸಮಕ್ಷಮ ಪಂಚನಾಮೆ ಮಾಡಿ ಯಾವುದೇ ಬಟ್ಟೆಗಳನ್ನು ವಶಕ್ಕೆ ಪಡೆದುಕೊಂಡಿಲ್ಲ. ನಿ.ಪಿ.**-18** ರಲ್ಲಿನ

ಅಂಶಗಳು ನನಗೆ ತಿಳಿದಿಲ್ಲ. ಸಾಕ್ಷಿಗೆ ನಿ.ಪಿ.**19** ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ಒಪ್ಪಿರುತ್ತಾರೆ. ಸದರಿ ಫೋಟೋವನ್ನು ಪೋಲಿಸರು ಯಾವ ಉದ್ದೇಶಕ್ಕಾಗಿ ತೆಗೆದಿರುತ್ತಾರೆ ಅಂತಾ ನನಗೆ ಹೇಳಲು ಆಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಮಹಜರಗೆ ವಿರುದ್ದವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>

**1)** ದಿನಾಂಕ: **02-01-2020** ರಂದು ಬಬಲೇಶ್ವರ ಪೋಲಿಸ ಠಾಣೆಯಲ್ಲಿ ಮೃತ ನಾಗವ್ವಳ ಗಂಡ ಶಂಕರ ಇವನು ಹಾಜರ ಪಡಿಸಿದ ಮೃತಳ ಮೈಮೇಲಿನ ಸುಟ್ಟ ಬಟ್ಟೆಗಳನ್ನು ನನ್ನ ಮತ್ತು ಚಾಸಾ **-4** ಇವರ ಸಮಕ್ಷಮ ಪಂಚನಾಮೆ ಮಾಡಿ ನಿ.ಪಿ.**-18** ರ ಪ್ರಕಾರ ಒಂದು ಬಿಳಿ ಗುಲಾಬಿ ಬಣ್ಣದ ಅಲ್ಲಲ್ಲಿ ಹೂವು ಇದ್ದ ಒಂದು ಸುಟ್ಟ ಸೀರೆ ಹಾಗೂ ತಿಳಿ ಕೇಸರಿ ಬಣ್ಣದ ಅಲ್ಲಲ್ಲಿ ಸುಟ್ಟ ಲಂಗವನ್ನು ವಶಕ್ಕೆ ಪಡೆದುಕೊಂಡಿದ್ದರು ಅನ್ನುವುದು ಸರಿಯಲ್ಲ. ಸದರಿ ಪಂಚನಾಮೆಯನ್ನು ಆ ದಿನ ಬೆಳಿಗ್ಗೆ **11-00** ರಿಂದ **11-30** ಗಂಟೆವರೆಗೆ ಠಾಣೆಯಲ್ಲಿ ನಮ್ಮ ಸಮಕ್ಷಮ ಮಾಡಿದ್ದರು ಅನ್ನುವುದು ಸರಿಯಲ್ಲ. ನಿ.ಪಿ.**-18** ರಲ್ಲಿರು ಅಂಶಗಳನ್ನು ನಾನು ಓದಿ ತಿಳಿದುಕೊಂಡು ಠಾಣೆಯಲ್ಲಿ ಸಹಿ ಮಾಡಿದ್ದೆ ಅನ್ನುವುದು ಸರಿಯಲ್ಲ. ಸದರಿ ಕಾಲಕ್ಕೆ ನಿ.ಪಿ.**-19** ರಂತೆ ಫೋಟೋವನ್ನು ಸಹ ತೆಗೆಯಲಾಗಿತ್ತು ಅಂದರೆ ಸರಿಯಲ್ಲ.

**2)** ನನಗೆ ನಿ.ಪಿ.**-18** ರಲ್ಲಿನ ಅಂಶಗಳು ತಿಳಿದ್ದರು ಸಹ ನಾನು ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ

ಅಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ.ಎಸ್.ಹೆಚ್.ಎಲ್.ವಕೀಲರಿಂದ ಆರೋಪಿತರ ಪರವಾಗಿ
ಪಾಟೀ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.
ಮರುವಿಚಾರಣೆಃ ಇರುವುದಿಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.

**11/07/2023**

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪೂರ ಇವರ ನ್ಯಾಯಾಲಯ**

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.**17/2020**
ಪಿ.ಡಬ್ಲೂ.**07**
ಸಿ.ಡಬ್ಲೂ.**09**

ಸಾಕ್ಷಿದಾರರ ಹೆಸರು : ಚನ್ನಬಸಪ್ಪ ಕೋಟ್ಯಾಳ

ತಂದೆಯ ಹೆಸರು : ರೇವಣೆಪ್ಪ

ವಯಸ್ಸು : 47 ವರ್ಷ.

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಬಬಲೇಶ್ವರ

**ಇಂದು ದಿನಾಂಕ 11-07-2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**

**1)** ಈ ದಿನ ನ್ಯಾಯಾಲಯದ ಮುಂದೆ ಗೈರಯ ಹಾಜರ ಇರುವ **4** ನೇ ಆರೋಪಿಯನ್ನು ಯಾವತ್ತು ನೋಡಿಲ್ಲ. ( ಈ ದಿನ ಆರೋಪಿತರು ಗೈರು ಹಾಜರು ಉಳಿದಿದ್ದು ಆರೋಪಿ ಪರ ವಕೀಲರು ವಿನಾಯತಿಗೆ ಅರ್ಜಿ ಸಲ್ಲಿಸಿದ್ದು ಅರ್ಜಿಯಲ್ಲಿ ಆರೋಪಿತರ ಗುರುತನ್ನು ವಿವಾದ ಮಾಡುವುದಿಲ್ಲ ಅಂತಾ ಹೇಳಿರುತ್ತಾರೆ).

**2)** ನನಗೆ ಸಹಿ ಮಾಡಲು ಬರುತ್ತದೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ. ಸದರಿ ದಾಖಲೆಯು **4** ನೇ ಆರೋಪಿತನು ಹಾಜರುಪಡಿಸಿದ ಮೋಟರ್ ಸೈಕಲ್ ಜಪ್ತಿ ಪಂಚನಾಮೆಯಾಗಿದ್ದು, ಅದನ್ನು ನಿಪಿ-**7** ಅಂತಾ ಈಗಾಗಲೇ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-**7**(ಬಿ) ಅಂತಾ ಗುರುತಿಸಲಾಯಿತು.

**3)** ನಾನು ನಿಪಿ-**7** ಪಂಚನಾಮೆಗೆ ಅಂದಾಜು ಎರಡು ವರ್ಷಗಳ ಹಿಂದೆ ಬಬಲೇಶ್ವರ ಪೋಲೀಸ್ ಠಾಣೆಯಲ್ಲಿ ನನ್ನ ಸಹಿ ಮಾಡಿರುತ್ತೇನೆ. ಯಾವ ವಿಚಾರಕ್ಕಾಗಿ ಪೋಲೀಸರು ನನ್ನ ಸಹಿಯನ್ನು ನಿಪಿ-**7** ಪಂಚನಾಮೆಗೆ ಪಡೆದುಕೊಂಡಿರುತ್ತಾರೆ ನನಗೆ ಗೊತ್ತಿಲ್ಲ.

**4)** ಪೋಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿ ಯಾವುದೇ ಮೋಟರ್ ಸೈಕಲ್ ಅನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ. ಆದರೆ, ಒಂದು ಮೋಟರ್ ಸೈಕಲ್ ಹತ್ತಿರ ನಮ್ಮನ್ನು ನಿಲ್ಲಿಸಿ ಎರಡು ಪೋಟೋಗಳನ್ನು ತೆಗೆಸಿರುತ್ತಾರೆ.

**5)** ಸಾಕ್ಷಿಗೆ ಈಗ ಎರಡು ಪೋಟೋಗಳನ್ನು ತೋರಿಸಿದ್ದು, ಅವುಗಳಲ್ಲಿ ತನ್ನ ಇರುವಿಕೆಯನ್ನು ನೋಡಿ ಸಾಕ್ಷಿ ಗುರುತಿಸುತ್ತಾರೆ. ಸದರಿ ಪೋಟೋಗಳನ್ನು ಈಗಾಗಲೇ ನಿಪಿ-**8** ಮತ್ತು **9** ಎಂದು ಗುರುತಿಸಲಾಗಿದೆ. ಸದರಿ ನಿಪಿ-**8** ಮತ್ತು **9** ಪೋಟೋಗಳಲ್ಲಿ ಮೋಟರ್ ಸೈಕಲ್ ಅನ್ನು ತೋರಿಸುತ್ತಿರುವ ವ್ಯಕ್ತಿ ಈಗ ನ್ಯಾಯಾಲಯದ ಮುಂದೆ ಇರುವುದಿಲ್ಲ. ಸಾಕ್ಷಿ ಮುಂದುವರೆದು, ಸದರಿ ಪೋಟೋಗಳಲ್ಲಿ ಸದರಿ ವ್ಯಕ್ತಿ ಮಾಸ್ಕ್ ಹಾಕಿಕೊಂಡಿರುವುದರಿಂದ ಗುರುತಿಸಲು ಆಗುವುದಿಲ್ಲ ಎಂದು ಹೇಳುತ್ತಾರೆ. ಪೋಲಿಸರು ನನ್ನ ಮುಂದೆ ಯಾವುದೇ ಮಹಜರ ಮಾಡಿಲ್ಲ ಯಾವುದೇ ವಾಹನವನ್ನು ವಶಕ್ಕೆ ಪಡೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪಂಚನಾಮೆ ವಿಷಯಗಳ ವಿರುದ್ದವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>

**6)** ದಿನಾಂಕಃ **16-06-2020** ರಂದು ವಿಜಯಪುರದ ಡಿ.ವಾಯ್.ಎಸ್.ಪಿ. ಇವರು ನನಗೆ ಮತ್ತು ಚಾಸಾ-**8** ಇವರಿಗೆ ಬಬಲೇಶ್ವರ ಪೋಲೀಸ್ ಠಾಣೆಯ

ಆವರಣಕ್ಕೆ ಕರೆಸಿ, ಅಲ್ಲಿ **4** ನೇ ಆರೋಪಿ ವಿಠ್ಠಲ ಚಲವಾದಿ ಈತನು, ಗುನ್ನೆಗೆ ಉಪಯೋಗಿಸಿದ ಟಿವ್ಹಿಎಸ್ ಕಂಪನಿಯ ಮೋಟರ್ ಸೈಕಲ್ ನಂ.ಕೆಎ-**19**/ಎಸ್-**7032** ನೇದ್ದನ್ನು ಜಪ್ತಿಪಡಿಸಿಕೊಂಡು ಸದರಿ ಪಂಚನಾಮೆಯನ್ನು ಸಂಜೆ **4-45** ರಿಂದ **5-15** ಗಂಟೆವರೆಗೆ ನನ್ನ ಮತ್ತು ಚಾಸಾ-**8** ಇವರ ಸಮಕ್ಷಮ ನಿಪಿ-**7** ರಂತೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಕಾಲಕ್ಕೆ ನಿಪಿ-**8** ಮತ್ತು **9** ರಂತೆ ಫೋಟೋಗಳನ್ನು ತೆಗೆಸಿರುತ್ತಾರೆ ಎಂದರೆ ಸರಿಯಲ್ಲ.

**7)** ಆರೋಪಿಗಳಿಗೆ ಸಹಾಯ ಮಾಡಲು ನಾನು ನಿಪಿ-**7** ಪಂಚನಾಮೆಯಲ್ಲಿರುವ ವಿಷಯಗಳನ್ನು ಅಲ್ಲಗಳೆದು, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ.ಎಸ್.ಹೆಚ್.ಎಲ್. ವಕೀಲರಿಂದ ಆರೋಪಿತರ ಪರವಾಗಿ</u>

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.

**11/07/2023**

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪೂರ ಇವರ ನ್ಯಾಯಾಲಯ**

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.**17/2020**
ಪಿ.ಡಬ್ಲೂ.**08**
ಸಿ.ಡಬ್ಲೂ.**10**

ಸಾಕ್ಷಿದಾರರ ಹೆಸರು : ಸಿದ್ದಪ್ಪ ಕನ್ನೂರ

ತಂದೆಯ ಹೆಸರು : ನಾಗಪ್ಪ

ವಯಸ್ಸು : 32 ವರ್ಷ.

ಉದ್ಯೋಗ : ಫೋಟೋಗ್ರಾಫರ್

ವಾಸಸ್ಥಳ : ಗುಣದಾಳ

**ಇಂದು ದಿನಾಂಕ 11-07-2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದ**

**1)** ನಾನು ಈ ಮೊದಲು ಪುಲ್ಯಾದ ಶಿವಪ್ಪ ಚಲವಾದಿ, ವಿಠಲ ಶಿವಪ್ಪ ಚಲವಾದಿ, ರಘುಕುಮಾರು ಗೈಬು ಚಲವಾದಿ ಇವರುಗಳನ್ನು ನೋಡಿಲ್ಲ.

**2)** ಸಾಕ್ಷಿಗೆ ದಿನಾಂಕ: **17-06-2020** ರ ಒಳಸಂಚು ಮಾಡಿದ ಮತ್ತು ಪೆಟ್ರೋಲ್ ಖರೀದಿಸಿ ಜಾಗೆಯ ಪಂಚನಾಮೆ ಮೇಲೆ ಇರುವ ಸಹಿಯನ್ನು ಗುರುತಿಸಿದ್ದರಿಂದ ಅದನ್ನು ನಿ.ಪಿ.**-20** ಸಾಕ್ಷಿಯ ಸಹಿಯನ್ನು ನಿ.ಪಿ.**-20** (ಎ) ಅಂತಾ ಗುರುತಿಸಲಾಯಿತು. ಸದರಿ ಸಹಿಯನ್ನು ಈಗ್ಗೆ **2-3** ವರ್ಷಗಳ ಹಿಂದೆ ನಾನು ನನ್ನ ವಾಹನಕ್ಕೆ ಪೆಟ್ರೋಲ್ ಹಾಕಿಸಿಕೊಂಡು ಬರಲು ಬಿದರಿ ಪೆಟ್ರೋಲ್ ಪಂಪ್ ಹತ್ತಿರ ಪೋಲಿಸರು ಸಹಿ ಪಡೆದಿರುತ್ತಾರೆ. ನಿ.ಪಿ.**-20** ರಲ್ಲಿ ಬರೆದಿರುವ ಅಂಶಗಳು ನನಗೆ ತಿಳಿದಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಆದರೆ ಎರಡು ಫೋಟೋಗಳನ್ನು ತೆಗೆದಿರುತ್ತಾರೆ ಸಾಕ್ಷಿಯು ಫೋಟೋಗಳಲ್ಲಿ ತನ್ನ ಇರುವಿಕೆಯನ್ನು ಒಪ್ಪಿದ್ದರಿಂದ ಅವುಗಳನ್ನು ನಿ.ಪಿ.**-21**

ಮತ್ತು 22 ಅಂತಾ ಗುರುತಿಸಲಾಯಿತು. ಸದರಿ ಫೋಟೋಗಳನ್ನು ಪೋಲಿಸರು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಅಂತಾ ನನಗೆ ಹೇಳಲಾಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತಾನು ನೀಡಿದ ಹೇಳಿಕೆ ಮತ್ತು ಮರುಹೇಳಿಕೆಯ ವಿರುದ್ಧವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>

**1)** ದಿನಾಂಕ:**17-06-2020** ರಂದು ಸಂಜೆ **14-15** ರಿಂದ **16-15** ರವರೆಗೆ ನನ್ನ ಮತ್ತು ಚಾಸಾ**11** ರ ಸಮಕ್ಷಮ ಬಿದರಿ ಆರ್ .ಸಿ. ಪ್ಲಾಟ ಹತ್ತಿರ ಬಡೇಘರ ಎಚ್.ಪಿ. ಪೆಟ್ರೋಲ್ ಪಂಪನಲ್ಲಿ ನಿ.ಪಿ.-**20** ರ ಪ್ರಕಾರ ಮಹಜರ ಮಾಡಿ ನಿ.ಪಿ.-**21** ಮತ್ತು **22** ರ ಪ್ರಕಾರ ಫೋಟೋಗಳನ್ನು ತೆಗೆದಿರುತ್ತಾರೆ ಅನ್ನುವುದು ಸರಿಯಲ್ಲ. ಆರೋಪಿ ನಂ. **3,4,5** ಸದರಿ ಸ್ಥಳವನ್ನು ಮೃತ ನಾಗವ್ವಳನ್ನು ಕೊಲೆ ಮಾಡಲು ಸಂಚು ಮಾಡಿದ ಸ್ಥಳವೆಂದು ತೋರಿಸಿದ್ದರು ಅಂದರೆ ಸರಿಯಲ್ಲ. ಆರೋಪಿ ನಂ. **4** ಮತ್ತು **6** ಪೆಟ್ರೋಲನ್ನು ಖರೀದಿ ಮಾಡಿದ ಸ್ಥಳವನ್ನು ತೋರಿಸಿದರು ಅಂದರೆ ಸರಿಯಲ್ಲ. ನಾನು ನಿ.ಪಿ.-**20** ರಲ್ಲಿನ ಅಂಶಗಳನ್ನು ಸ್ಥಳದಲ್ಲಿ ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ.

**2)** ಈಗ ನಾನು ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ.ಎಸ್.ಹೆಚ್.ಎಲ್. ವಕೀಲರಿಂದ ಆರೋಪಿತರ ಪರವಾಗಿ</u>

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.

**11/07/2023**

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು, ವಿಜಯಪೂರ ಇವರ ನ್ಯಾಯಾಲಯ**

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.**17/2020**
ಪಿ.ಡಬ್ಲೂ.**09**
ಸಿ.ಡಬ್ಲೂ.**11**

ಸಾಕ್ಷಿದಾರರ ಹೆಸರು : ಮೌಲಾಸಬ ವಡಗಾಂವಕರ

ತಂದೆಯ ಹೆಸರು : ಪೈಗಂಬರ

ವಯಸ್ಸು : 36 ವರ್ಷ.

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಗುಣದಾಳ

ಇಂದು ದಿನಾಂಕ **11-07-2023** ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

**1)** ನಾನು ಈ ಮೊದಲು ಪ್ರಲ್ಹಾದ ಶಿವಪ್ಪ ಚಲವಾದಿ, ವಿಠಲ ಶಿವಪ್ಪ ಚಲವಾದಿ, ರಘುಕುಮಾರು ಗೈಬು ಚಲವಾದಿ ಇವರುಗಳನ್ನು ನೋಡಿಲ್ಲ.

**2)** ಸಾಕ್ಷಿಗೆ ದಿನಾಂಕ**: 17-06-2020** ರ ಒಳಸಂಚು ಮಾಡಿದ ಮತ್ತು ಪೆಟ್ರೋಲ್ ಖರೀದಿಸಿ ಜಾಗೆಯ ಪಂಚನಾಮೆ ಮೇಲೆ ಇರುವ ಸಹಿಯನ್ನು ಗುರುತಿಸಿದ್ದರಿಂದ ಅದನ್ನು ಈಗಾಗಲೇ ನಿ.ಪಿ.**-20** ಅಂತಾ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.**-20 (**ಬಿ**)** ಅಂತಾ ಗುರುತಿಸಲಾಯಿತು. ಸದರಿ ಸಹಿಯನ್ನು ಈಗ್ಗ **2-3** ವರ್ಷಗಳ ಹಿಂದೆ ನನ್ನ ಹೊಲದ ಹತ್ತಿರ ಇರುವ ಬಿದರಿ ಪೆಟ್ರೋಲ್ ಪಂಪ್ ಹತ್ತಿರ ಪೋಲಿಸರು ಸಹಿ ಪಡೆದಿರುತ್ತಾರೆ. ನಿ.ಪಿ.**-20** ರಲ್ಲಿ ಬರೆದಿರುವ ಅಂಶಗಳು ನನಗೆ ತಿಳಿದಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಆದರೆ ಎರಡು ಫೋಟೋಗಳನ್ನು ತೆಗೆದಿರುತ್ತಾರೆ ಸಾಕ್ಷಿಯು ಫೋಟೋಗಳಲ್ಲಿ ತನ್ನ ಇರುವಿಕೆಯನ್ನು ಒಪ್ಪಿದ್ದು ಅವುಗಳನ್ನು

ಈಗಾಗಲೇ ನಿ.ಪಿ.-21 ಮತ್ತು 22 ಅಂತಾ ಗುರುತಿಸಲಾಗಿದೆ. ಸದರಿ ಫೋಟೋಗಳನ್ನು ಪೋಲಿಸರು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಅಂತಾ ನನಗೆ ಹೇಳಲಾಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತಾನು ನೀಡಿದ ಹೇಳಿಕೆ ಮತ್ತು ಮರುಹೇಳಿಕೆಯ ವಿರುದ್ಧವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>

1) ದಿನಾಂಕ:17-06-2020 ರಂದು ಸಂಜೆ 14-15 ರಿಂದ 16-15 ರವರೆಗೆ ನನ್ನ ಮತ್ತು ಚಾಸಾ10 ರ ಸಮಕ್ಷಮ ಬಿದರಿ ಆರ್ .ಸಿ. ಪ್ಲಾಟ ಹತ್ತಿರ ಬಡೇಘರ ಎಚ್.ಪಿ. ಪೆಟ್ರೋಲ್ ಪಂಪನಲ್ಲಿ ನಿ.ಪಿ.-20 ರ ಪ್ರಕಾರ ಮಹಜರ ಮಾಡಿ ನಿ.ಪಿ.- 21 ಮತ್ತು 22 ರ ಪ್ರಕಾರ ಫೋಟೋಗಳನ್ನು ತೆಗೆದಿರುತ್ತಾರೆ ಅನ್ನುವುದು ಸರಿಯಲ್ಲ. ಆರೋಪಿ ನಂ. 3,4,5 ಸದರಿ ಸ್ಥಳವನ್ನು ಮೃತ ನಾಗವ್ವಳನ್ನು ಕೊಲೆ ಮಾಡಲು ಸಂಚು ಮಾಡಿದ ಸ್ಥಳವೆಂದು ತೋರಿಸಿದ್ದರು ಅಂದರೆ ಸರಿಯಲ್ಲ. ಆರೋಪಿ ನಂ. 4 ಮತ್ತು 6 ಪೆಟ್ರೋಲನ್ನು ಖರೀದಿ ಮಾಡಿದ ಸ್ಥಳವನ್ನು ತೋರಿಸಿದರು ಅಂದರೆ ಸರಿಯಲ್ಲ. ನಾನು ನಿ.ಪಿ.-20 ರಲ್ಲಿನ ಅಂಶಗಳನ್ನು ಸ್ಥಳದಲ್ಲಿ ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ.

2) ಈಗ ನಾನು ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ.ಎಸ್.ಹೆಚ್.ಎಲ್. ವಕೀಲರಿಂದ ಆರೋಪಿತರ ಪರವಾಗಿ</u>

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.

**11/07/2023**